ಸ್ವಾರಸ್ಯ ಆಸ್ಟ್ರಿಯಾ ಹಾಗೂ ಸ್ವಿಜರ್‌ಲೆಂಡ್ ನಡುವಿನ 1954ರ ಫಿಫಾ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬರೋಬ್ಬರಿ 7–5 ಗೋಲು (ಒಟ್ಟು 12 ಗೋಲು) ದಾಖಲಾಗಿತ್ತು. 7 ದಶಕ ಕಳೆದರೂ ವಿಶ್ವಕಪ್ ಇತಿಹಾಸದಲ್ಲಿ ಅತಿ ಹೆಚ್ಚು ಗೋಲು ದಾಖಲಾದ ಪಂದ್ಯವೆಂಬ ದಾಖಲೆಯನ್ನು ಆ ಪಂದ್ಯ ಉಳಿಸಿಕೊಂಡಿದೆ.

ಅಮೆರಿಕ ಗೋಲು ಮಳೆ, 4-1ರಲ್ಲಿ ಭರ್ಜರಿ ಗೆಲುವು

ಪರಗ್ವೆ ವಿರುದ್ಧ ಮೊದಲ ಪಂದ್ಯದಲ್ಲಿ ಆತಿಥೇಯ ತಂಡದ ಅಬ್ಬರ | ಫಿಫಾ ವಿಶ್ವಕಪ್‌ನಲ್ಲಿ ಅಮೆರಿಕ ಅತಿ ದೊಡ್ಡ ಗೆಲುವಿನ ದಾಖಲೆ

ಲಾಸ್ ಏಂಜಲೀಸ್ ಕ್ರೀಡಾಂಗಣದಲ್ಲಿ ನಡೆದ ಪರಗ್ವೆ ವಿರುದ್ಧ ಪಂದ್ಯದಲ್ಲಿ ಅಮೆರಿಕ ಪರ ಗೋಲು ಬಾರಿಸಿದ ಬಾಲೋಗನ್

ಇಂಗಲ್‌ವುಡ್(ಕ್ಯಾಲಿಫೋರ್ನಿಯಾ): ಫಿಫಾ ವಿಶ್ವಕಪ್‌ನಲ್ಲಿ ಆತಿಥೇಯ ಅಮೆರಿಕ ಭರ್ಜರಿ ಗೆಲುವಿನೊಂದಿಗೆ ಶುಭಾರಂಭ ಮಾಡಿದೆ. ಶನಿವಾರ ಮುಂಜಾನೆ ನಡೆದ ಪರಗ್ವೆ ವಿರುದ್ಧ ಪಂದ್ಯದಲ್ಲಿಗೋಲಿನಮಳೆಸುರಿಸಿದಅಮೆರಿಕ4-1ಅಂತರದಲ್ಲಿ ಜಯಭೇರಿ ಬಾರಿಸಿತು. ಈ ಮೂಲಕ ವಿಶ್ವಕಪ್ ಪಂದ್ಯದಲ್ಲೇ ತನ್ನ ಗರಿಷ್ಠ ಗೋಲಿನ ದಾಖಲೆ ಬರೆಯಿತು.

ಅಮೆರಿಕ ತಂಡ 2022ರ ವಿಶ್ವಪ್‌ನಲ್ಲಿ 3 ಪಂದ್ಯಗಳಲ್ಲಿ ಕೇವಲ 4 ಗೋಲು ಬಾರಿಸಿತ್ತು. ಅಲ್ಲದೆ, ವಿಶ್ವಕಪ್ ಪಂದ್ಯದಲ್ಲಿ ಈವರೆಗೂ 3ಕ್ಕಿಂತ ಹೆಚ್ಚು ಗೋಲು ಬಾರಿಸಿರಲಿಲ್ಲ. ಆದರೆ ಪರಗ್ವೆ ವಿರುದ್ಧ ತಂಡ ಮೊದಲಾರ್ಧದಲ್ಲೇ 3-0 ಮುನ್ನಡೆ ಸಾಧಿಸಿತು.

ಪರಗ್ವೆ ಆಟಗಾರ ಡಾಮಿಯನ್ ಬೊಬಾದಿಲ್ಲಾ 31ನೇ ನಿಮಿಷದಲ್ಲಿ ಮಾಡಿದ ಓನ್ ಗೋಲ್ ಎಡವಟ್ಟಿನಿಂದಾಗಿ ಅಮೆರಿಕ 1-0 ಮುನ್ನಡೆ ಪಡೆಯಿತು. ಬಳಿಕ ಫೊಲಾರಿನ್ ಬಾಲೋಗನ್ 32 ಹಾಗೂ ಮೊದಲಾರ್ಧದ ಹೆಚ್ಚುವರಿ ನಿಮಿಷ(45+5)ದಲ್ಲಿ 2 ಗೋಲು ದಾಖಲಿಸಿ ಅಮೆರಿಕಕ್ಕೆ ಬಹುತೇಕ ಗೆಲುವು ಖಚಿತಪಡಿಸಿಕೊಂಡರು. ಬಳಿಕ ದ್ವಿತೀಯಾರ್ಧದ 73ನೇ ನಿಮಿಷದಲ್ಲಿ ಪರಗ್ವೆ ಪರ ಮಾರಿಸಿಯೊ ಗೋಲು ದಾಖಲಿಸಿದರೂ, 98ನೇ ನಿಮಿಷದಲ್ಲಿ ಜಿಯೋವಾನಿ ರೇನಾ ಬಾರಿಸಿದ ಗೋಲು ಅಮೆರಿಕದ ಗೆಲುವಿನ ಅಂತರವನ್ನು ಮತ್ತಷ್ಟು ಹೆಚ್ಚಿಸಿತು.

■ ಇಂದಿನ ಪಂದ್ಯಗಳು
ಹೈಟಿ–ಸ್ಕಾಟ್ಲೆಂಡ್, ಬೆಳಗ್ಗೆ 6.30ಕ್ಕೆ(ಬೋಸ್ಟನ್)
ಆಸ್ಟ್ರೇಲಿಯಾ–ಟರ್ಕಿ, ಬೆಳಗ್ಗೆ 9.30ಕ್ಕೆ(ವ್ಯಾಂಕೋವರ್)
ಜರ್ಮನಿ–ಕ್ಯುರಾಕಾವೊ, ರಾತ್ರಿ 10.30ಕ್ಕೆ(ಹಾಸ್ಟನ್)
ನೆದರ್‌ಲೆಂಡ್ಸ್–ಜಪಾನ್, ರಾತ್ರಿ 1:30ಕ್ಕೆ(ಡಲ್ಲಾಸ್)

ಗರ್ಭಿಣಿಗೆ ವಿಮಾನವೇರಲು ನಿರಾಕರಿಸಿದ್ದರಿಂದ ಅಮೆರಿಕದಲ್ಲೇ ಹುಟ್ಟಿದ್ದವ ಈಗ ವಿಶ್ವಕಪ್ ಸ್ಟಾರ್!

ಲಂಡನ್‌ಗೆ ತೆರಳಲಾಗದೆ ನ್ಯೂಯಾರ್ಕ್‌ನಲ್ಲೇ ಬಾಲೋಗನ್‌ಗೆ ಜನ್ಮ ನೀಡಿದ್ದ ತಾಯಿ

ಲಾಸ್ ಏಂಜಲೀಸ್: 25 ವರ್ಷಗಳ ಹಿಂದೆ ಅಮೆರಿಕದ ವಿಮಾನಯಾನ ಸಿಬ್ಬಂದಿಯು ಲಂಡನ್‌ನ ಗರ್ಭಿಣಿ ಮಹಿಳೆಗೆ ವಿಮಾನ ವೇರಲು ಬಿಟ್ಟಿದ್ದರೆ ಈ ಬಾರಿ ವಿಶ್ವಕಪ್‌ನಲ್ಲಿ ಅಮೆರಿಕ ತಂಡಕ್ಕೆ ಬಹುಶಃ ಫೊಲಾರಿನ್ ಬಾಲೋಗನ್ ಎಂಬ ತಾರಾ ಸ್ಟ್ರೈಕರ್ ಸಿಗುತ್ತಿರಲಿಲ್ಲ.

1930ರ ಬಳಿಕ ವಿಶ್ವಕಪ್ ಪಂದ್ಯವೊಂದರಲ್ಲಿ 2 ಗೋಲು ಬಾರಿಸಿದ ಅಮೆರಿಕದ ಮೊದಲ ಆಟಗಾರ ಎನಿಸಿಕೊಂಡಿರುವ ಬಾಲೋಗನ್ ಹುಟ್ಟಿದ್ದು ಅಮೆರಿಕದಲ್ಲೇ ಆಗಿದ್ದರೂ ಅವರ ಪೋಷಕರು ನೈಜೀರಿಯಾದವರು. ಆದರೆ ಇಂಗ್ಲೆಂಡ್‌ನಲ್ಲಿ ವಾಸ. ಬಾಲೋಗನ್‌ರ ತಾಯಿ ಫ್ಲೋರೆನ್ಸ್ 2001ರಲ್ಲಿ ತಮ್ಮ ಕುಟುಂಬಸ್ಥರನ್ನು ಭೇಟಿಯಾಗಲು ಲಂಡನ್‌ನಿಂದ ನ್ಯೂಯಾರ್ಕ್‌ಗೆ ತೆರಳಿದ್ದರು. ಆದರೆ ಹಿಂದಿರುಗುವಾಗ ಮೆಡಿಕಲ್ ಕ್ಲಿಯರೆನ್ಸ್ ಇಲ್ಲದ ಕಾರಣ ತುಂಬು ಗರ್ಭಿಣಿಗೆ ವಿಮಾನವೇರಲು ಅಮೆರಿಕದಲ್ಲಿ ಅವಕಾಶ ಸಿಕ್ಕಿಲ್ಲ. ಹೀಗಾಗಿ ಫ್ಲೋರೆನ್ಸ್ ಅಲ್ಲೇ ಉಳಿದು ಮಗುವಿಗೆ ಜನ್ಮ ನೀಡಿದ್ದರು. ವಾರದಲ್ಲೇ ಅವರು ಲಂಡನ್‌ಗೆ ಮರಳಿದ್ದರು. ಬಾಲೋಗನ್ ಅಲ್ಲೇ ಬೆಳೆದು, ಸಣ್ಣ ವಯಸ್ಸಿನಲ್ಲೇ ಆರ್ಸೆನಲ್ ಕ್ಲಬ್‌ನ ಹೇಲ್ ಎಂಡ್ ಅಕಾಡೆಮಿಯಲ್ಲಿ ಫುಟ್ಬಾಲ್ ತರಬೇತಿ ಆರಂಭಿಸಿದ್ದರು. ಬಳಿಕ ಅಲ್ಲಿಂದ ಫ್ರಾನ್ಸ್‌ಗೆ ತೆರಳಿ ಪ್ರತಿಭಾವಂತ ಫುಟ್ಬಾಲರ್ ಆಗಿ ಬೆಳೆದರು. ಅಲ್ಲಿಂದ ಮತ್ತೆ ಅಮೆರಿಕದತ್ತ ಪಯಣ ಬೆಳೆಸಿದ ಬಾಲೋಗನ್ 2023ರಿಂದ ಅಲ್ಲಿನ ರಾಷ್ಟ್ರೀಯ ತಂಡದ ಪರ ಆಡುತ್ತಿದ್ದಾರೆ.

ನೈಜೀರಿಯಾದ ಪೋಷಕರಿಗೆ ಹುಟ್ಟಿ, ಅಮೆರಿಕದ ಪೌರನಾಗಿ, ಲಂಡನ್‌ನಲ್ಲಿ ಫುಟ್ಬಾಲ್ ಕಲಿತು, ಫ್ರಾನ್ಸ್‌ನಲ್ಲಿ ಓರ್ವ ಗೋಲ್‌ಸ್ಕೋರರ್ ಆಗಿ ಬೆಳೆದು, ಇಂಗ್ಲೆಂಡ್‌ನ ಅಂಡರ್‌-17, ಅಂಡರ್‌-21 ರಾಷ್ಟ್ರೀಯ ತಂಡದ ಪರ ಆಡಿದ್ದ ಬಾಲೋಗನ್, ಈಗ ಅಮೆರಿಕ ತಂಡಕ್ಕೆ ಫಿಫಾ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಗೆಲುವಿನ ರೂವಾರಿಯಾಗಿದ್ದಾರೆ.

ಇಂಗ್ಲೆಂಡ್ ಟೀಂಗೆ ಕಳ್ಳರ ಶಾಕ್: ಎಲ್ಲರ ಶೂ ಕಳ್ಳತನ, ಒಂದೇ ಚೆಂಡು ಬಾಕಿ!

ಫಿಫಾ ವಿಶ್ವಕಪ್ ಆಡಲು ಅಮೆರಿಕದಲ್ಲಿರುವ ಇಂಗ್ಲೆಂಡ್ ಫುಟ್ಬಾಲ್ ತಂಡದ ತರಬೇತಿ ಸಾಮಗ್ರಿಗಳು ಮತ್ತು ಶೂಗಳನ್ನು ಕಳ್ಳತನ ಮಾಡಲಾಗಿದೆ. ಅಲ್ಲಿನ ಕಾನ್ಸಾಸ್ ಸಿಟಿಯಲ್ಲಿರುವ ತಮ್ಮ ತರಬೇತಿ ಶಿಬಿರಕ್ಕೆ ಇಂಗ್ಲೆಂಡ್ ತಂಡದ ಸಾಮಗ್ರಿಗಳನ್ನು ಸಾಗಿಸುತ್ತಿದ್ದ ವಾಹನವನ್ನು ಒಡೆದು ಈ ದರೋಡೆ ಮಾಡಲಾಗಿದ್ದು, ಆಟಗಾರರು ಪಂದ್ಯಕ್ಕೆ ಧರಿಸಬೇಕಿದ್ದ ಶೂ, ಜೆರ್ಸಿ ಕಿಟ್, ಕೋಚಿಂಗ್ ಸಿಬ್ಬಂದಿಯ ತಾಂತ್ರಿಕ ಉಪಕರಣಗಳನ್ನು ಕಳ್ಳರು ಹೊತ್ತೊಯ್ದಿದ್ದಾರೆ. ಸದ್ಯ ಇಂಗ್ಲೆಂಡ್ ತಂಡದ ಬಳಿ ಅಭ್ಯಾಸಕ್ಕೆ ಒಂದೇ ಚೆಂಡು ಉಳಿದಿದೆ ಎಂದು ವರದಿ ಯಾಗಿದೆ. ಕನ್ಸಾಸ್ ಸಿಟಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಈಗಾಗಲೇ ಇಬ್ಬರು ಶಂಕಿತರನ್ನು ವಶಕ್ಕೆ ಪಡೆಯಲಾಗಿದ್ದು, ಅಲ್ಲದೆ, ಕಳುವಾಗಿದ್ದ ಹೆಚ್ಚಿನ ಬೂಟ್‌ಗಳು ಹಾಗೂ ತರಬೇತಿ ಸಾಮಗ್ರಿಗಳನ್ನು ಪತ್ತೆ ಹಚ್ಚಿದ್ದಾರೆ ಎಂದು ಹೇಳ ಲಾಗುತ್ತಿದೆ. ಇಂಗ್ಲೆಂಡ್ ತನ್ನ ಮೊದಲ ಪಂದ್ಯದಲ್ಲಿ ಜೂ.17ರಂದು ಕ್ರೊವೇಷಿಯಾ ವಿರುದ್ಧ ಆಡಲಿದೆ.

ಸ್ಕಾಟ್ಲೆಂಡ್ ತಂಡವನ್ನು ಬೆಂಬಲಿಸಲು ಅಭಿಮಾನಿ 4000 ಕಿ.ಮೀ. ಕಾಲ್ನಡಿಗೆ!

ಈ ಬಾರಿ ವಿಶ್ವಕಪ್‌ನಲ್ಲಿ ಆಡುತ್ತಿರುವ ಸ್ಕಾಟ್ಲೆಂಡ್ ತಂಡವನ್ನು ಬೆಂಬಲಿಸಲು ಆ ದೇಶದ ಅಭಿಮಾನಿಯೊಬ್ಬರು ಬರೋಬ್ಬರಿ 4000 ಕಿ.ಮೀ. ದೂರ ಕಾಲ್ನಡಿಗೆಯಲ್ಲೇ ಸಂಚರಿಸಿದ್ದಾರೆ. ಸ್ಕಾಟ್ಲೆಂಡ್ ತಂಡ 28 ವರ್ಷಗಳ ಬಳಿಕ ವಿಶ್ವಕಪ್‌ನಲ್ಲಿ ಆಡುತ್ತಿದೆ. ಹೀಗಾಗಿ ತಮ್ಮ ದೇಶದ ತಂಡವನ್ನು ಬೆಂಬಲಿಸಲು ಫೆಬ್ರವರಿಯಲ್ಲಿ 22 ವರ್ಷದ ಕ್ರೇಗ್ ಫರ್ಗ್ಯೂಸನ್ ಲಾಸ್ ಏಂಜಲೀಸ್‌ನಿಂದ ಬೋಸ್ಟನ್‌ಗೆ ಕಾಲ್ನಡಿಗೆ ಆರಂಭಿಸಿದ್ದರು. ಅವರು ಶನಿವಾರ ನಡೆಯಲಿರುವ ಹೈಟಿ ವಿರುದ್ಧ ಪಂದ್ಯದ ವೇಳೆ ಕ್ರೀಡಾಂಗಣದಲ್ಲಿ ಹಾಜರಿರಲಿದ್ದಾರೆ. ಕ್ರೇಗ್ ತಮ್ಮ ಕಾಲ್ನಡಿಗೆ ವೇಳೆ 'ಸ್ಕಾಟಿಶ್ ಆ್ಯಕ್ಷನ್ ಫಾರ್ ಮೆಂಟಲ್ ಹೆಲ್ತ್' ಅಭಿಯಾನದ ಭಾಗವಾಗಿ ನಿಧಿಯನ್ನೂ ಸಂಗ್ರಹಿಸಿದ್ದಾರೆ. ಅವರು ಈ ಹಿಂದೆ 2024ರ ಯುರೋ ಕಪ್‌ಗೂ ಮುನ್ನ ಸ್ಕಾಟ್ಲೆಂಡ್‌ನಿಂದ ಜರ್ಮನಿಗೆ ಇದೇ ರೀತಿ ಕಾಲ್ನಡಿಗೆಯಲ್ಲೇ ಸಂಚರಿಸಿದ್ದರು.

ಕೆನಡಾ vs ಬೋಸ್ನಿಯಾ ಪಂದ್ಯ 1-1ರಿಂದ ಡ್ರಾ

ವಿಶ್ವಕಪ್‌ನಲ್ಲೇ ಇದು ಕೆನಡಾ ತಂಡದ ಮೊದಲ ಅಂಕ | ಹಿಂದಿನ 6 ಪಂದ್ಯದಲ್ಲಿ ಸೋಲು

ಚೆಂಡನ್ನು ಪಾಸ್ ಮಾಡುತ್ತಿರುವ ಕೆನಡಾದ ರಿಚೀ ಲಾರ್ಯ

ಟೊರೊಂಟೊ: ಈ ಬಾರಿ ಫಿಫಾ ವಿಶ್ವಕಪ್ ಆತಿಥ್ಯ ವಹಿಸುತ್ತಿರುವ 3 ದೇಶಗಳ ಪೈಕಿ ಒಂದಾಗಿರುವ ಕೆನಡಾ ಮಾತ್ರ ಟೂರ್ನಿಯಲ್ಲಿ ಗೆಲುವಿನ ಆರಂಭ ಪಡೆಯಲು ವಿಫಲವಾಗಿದೆ. ಮಧ್ಯರಾತ್ರಿ ಬೋಸ್ನಿಯಾ-ಹೆರ್ಜೆಗೋವಿನಾ ವಿರುದ್ಧ ನಡೆದ ಪಂದ್ಯದಲ್ಲಿ ಆತಿಥೇಯ ಕೆನಡಾ 1-1 ಗೋಲುಗಳಲ್ಲಿ ಡ್ರಾಗೆ ತೃಪ್ತಿ ಪಟ್ಟುಕೊಂಡಿದೆ. ಆದರೂ 3ನೇ ವಿಶ್ವಕಪ್ ಆಡುತ್ತಿರುವ ಕೆನಡಾ ತಂಡ ಇದೇ ಮೊದಲ ಬಾರಿ ಅಂಕ ಖಾತೆ ತೆರೆದಿದೆ.

1986 ಹಾಗೂ 2022ರ ವಿಶ್ವಕಪ್‌ನಲ್ಲಿ ಆಡಿದ್ದ ಕೆನಡಾ ಎಲ್ಲಾ 6 ಪಂದ್ಯಗಳಲ್ಲೂ ಸೋತಿತ್ತು. ಈ ಬಾರಿ ಚೊಚ್ಚಲ ಪಂದ್ಯದಲ್ಲಿ 21ನೇ ನಿಮಿಷದಲ್ಲೇ ಬೋಸ್ನಿಯಾಗೆ ಗೋಲಿನ ಮುನ್ನಡೆ ಬಿಟ್ಟುಕೊಟ್ಟರೂ ಪಂದ್ಯ ಡ್ರಾಗೊಳಿಸಲು ಯಶಸ್ವಿಯಾಯಿತು. ಬೋಸ್ನಿಯಾ ಪರ ಜೊವೊ ಲುಕಿಚ್ ಗೋಲು ಬಾರಿಸಿದರೆ, ಸಬ್‌ಸ್ಟಿಟ್ಯೂಟ್ ಆಟಗಾರನಾಗಿ ಮೈದಾನಕ್ಕೆ ಬಂದ ಸೈಲ್ ಲ್ಯಾರಿನ್ 78ನೇ ನಿಮಿಷದಲ್ಲಿ ಗೋಲು ದಾಖಲಿಸುವ ಮೂಲಕ ಪಂದ್ಯ ಡ್ರಾಗೊಳಿಸಲು ನೆರವಾದರು.

ಸುದ್ದಿ ಸಿಂಚನ

ಆಸ್ಟ್ರೇಲಿಯನ್ ಓಪನ್: ಸೆಮೀಸ್ ಸೋತ ಸಿಂಧು

ಸಿಡ್ನಿ: ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಭಾರತದ ತಾರಾ ಆಟಗಾರ್ತಿ ಪಿ.ವಿ.ಸಿಂಧುಆಘಾತಕಾರಿ ಸೋಲನುಭವಿಸಿದ್ದಾರೆ. ಅಗ್ರ ಶ್ರೇಯಾಂಕಿತೆ, ಜಪಾನಿನ ಅಕಾನೆ ಯಮಗುಚಿ ವಿರುದ್ಧ 20-22, 12-21 ಅಂತರದಲ್ಲಿ ಸೋತು ಸಿಂಧು ಪ್ರಶಸ್ತಿಯಿಂದ ವಂಚಿತರಾದರು. ಈ ಮೂಲಕ ಟೂರ್ನಿಯಲ್ಲಿ ಭಾರತದ ಅಭಿಯಾನವೂ ಅಂತ್ಯಗೊಂಡಿತು. 2024ರ ಡಿಸೆಂಬರ್‌ನಲ್ಲಿ ನಡೆದ ಸೆಯ್ಯದ್ ಮೋದಿ ಇಂಟರ್ನ್ಯಾಷನಲ್ ಟೂರ್ನಿ ಗೆದ್ದ ಬಳಿಕ ಸಿಂಧುಗೆ ಇದುವರೆಗೆ ಬಿಡಬ್ಲ್ಯುಎಫ್ ಟೂರ್ನಿಯಲ್ಲಿ ಯಾವುದೇ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಿಲ್ಲ.

ವೈಭವ್ ತಮ್ಮ ಆಶೀರ್ವಾದ್ ಆಟ, 87 ಎಸೆತಕ್ಕೆ 103 ರನ್

ಸಮಷ್ಟಿಪುರ: ಐಪಿಎಲ್‌ನಲ್ಲಿ ಸ್ಫೋಟಕ ಆಟವಾಡಿ ವೈಭವ್ ಸೂರ್ಯವಂಶಿ ಕ್ರಿಕೆಟ್ ಜಗತ್ತಿನ ಗಮನ ಸೆಳೆದ ಬೆನ್ನಲ್ಲೇ ಈಗ ಅವರ ತಮ್ಮ ಆಶೀರ್ವಾದ್ ಸೂರ್ಯವಂಶಿ ಕೂಡಾ ಸುದ್ದಿಯಲ್ಲಿದ್ದಾರೆ. ಬಿಹಾರದ ಸಮಷ್ಟಿಪುರದ ಕ್ರಿಕೆಟ್ ಅಕಾಡೆಮಿ ತಾಜ್‌ಪುರ ತಂಡದ ಪರ ಆರಂಭಿಕ ಬ್ಯಾಟರ್‌ಆಗಿ ಕಣಕ್ಕಿಳಿದ ಬಲಗೈ ಬ್ಯಾಟರ್ ಆಶೀರ್ವಾದ್ 87 ಎಸೆತಗಳನ್ನು ಎದುರಿಸಿದ 20 ಬೌಂಡರಿ, 1 ಸಿಕ್ಸರ್ ನೆರವಿನೊಂದಿಗೆ 103 ರನ್ ಸಿಡಿಸಿದ್ದಾರೆ. ಅಂದರೆ ಬೌಂಡರಿಗಳ ಮೂಲಕವೇ 86 ರನ್ ಕಲೆಹಾಕಿದ್ದಾರೆ.

ಐಪಿಎಲ್‌ನಲ್ಲಿ ವಿದೇಶಿಗರ ಲಭ್ಯತೆಯ ವಿಚಾರದಲ್ಲಿ ಮಧ್ಯಪ್ರವೇಶಿಸಲ್ಲ: ಬಿಸಿಸಿಐ

ಧರ್ಮಶಾಲಾ: ಐಪಿಎಲ್ ಹರಾಜಿನಲ್ಲಿ ಪಾಲ್ಗೊಂಡು ಆ ಬಳಿಕ ಟೂರ್ನಿಯಿಂದ ಹಿಂದೆ ಸರಿಯುವ ವಿದೇಶಿ ಆಟಗಾರರ ವಿಚಾರದಲ್ಲಿ ಮಧ್ಯಪ್ರವೇಶಿಸಲು ಬಿಸಿಸಿಐ ನಿರಾಕರಿಸಿದೆ. ಆಟಗಾರರು ಮಧ್ಯದಲ್ಲಿಯೇ ಲೀಗ್‌ನಿಂದ ಹೊರ ಹೋಗುವುದರಿಂದ ಫ್ರಾಂಚೈಸಿಗಳಿಗೆ ನಷ್ಟ ಉಂಟಾಗುತ್ತಿತ್ತು. ಹೀಗಾಗಿ ಬಿಸಿಸಿಐ ಮಧ್ಯಪ್ರವೇಶಕ್ಕೆ ಫ್ರಾಂಚೈಸಿಗಳು ಮನವಿ ಮಾಡಿದ್ದವು. ಆದರೆ ಅಂತಹ ಯಾವುದೇ ಯೋಚನೆ ಸದ್ಯಕ್ಕಿಲ್ಲ ಎಂದು ಬಿಸಿಸಿಐ ಸ್ಪಷ್ಟಪಡಿಸಿದೆ. ಗಾಯದ ಸಮಸ್ಯೆ ಹೊರತುಪಡಿಸಿ ಬೇರೆ ಕಾರಣಗಳಿಂದ ಲೀಗ್‌ನಿಂದ ಹೊರಗುಳಿಯುವ ವಿದೇಶಿ ಆಟಗಾರರಿಗೆ ಬಿಸಿಸಿಐ ಎರಡು ವರ್ಷದ ನಿಷೇಧ ಶಿಕ್ಷೆ ಈಗಾಗಲೇ ಜಾರಿಯಲ್ಲಿದೆ.

ಐಸಿಸಿ ಮಹಿಳಾ ಟಿ20 ವಿಶ್ವಕಪ್

ಇಂದು ಭಾರತ vs ಪಾಕ್ ಹೈವೋಲ್ಟೇಜ್ ಪಂದ್ಯ

ಹರ್ಮನ್‌ಪ್ರೀತ್ ಪಡೆಗೆ ಶುಭಾರಂಭದ ಗುರಿ

ಬರ್ಮಿಂಗ್‌ಹ್ಯಾಮ್: ಈ ಬಾರಿ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಶುಭಾರಂಭ ಮಾಡಲು ಕಾಯುತ್ತಿರುವ ಭಾರತ ತಂಡ, ತನ್ನ ಮೊದಲ ಪಂದ್ಯದಲ್ಲಿ ಭಾನುವಾರ ಬದ್ಧವೈರಿ ಪಾಕಿಸ್ತಾನ ವಿರುದ್ಧ ಸೆಣಸಾಡಲಿದೆ.

ಕಳೆದ ವರ್ಷ ಏಕದಿನ ವಿಶ್ವಕಪ್ ಗೆಲ್ಲುವ ಮೂಲಕ ಐಸಿಸಿ ಟ್ರೋಫಿ ಬರ ನೀಗಿಸಿಕೊಂಡಿದ್ದ ಹರ್ಮನ್‌ಪ್ರೀತ್ ಕೌರ್ ಪಡೆ ಈಗ ಟಿ20 ವಿಶ್ವಕಪ್ ಮೇಲೆ ಕಣ್ಣಿಟ್ಟಿದೆ. ಭಾರತಕ್ಕೆ ಮುಂದಿನ ಪಂದ್ಯಗಳಲ್ಲಿ ಬಲಿಷ್ಠ ತಂಡಗಳ ಸವಾಲು ಎದುರಾಗಲಿರುವುದರಿಂದ ಪಾಕ್ ವಿರುದ್ಧ ದೊಡ್ಡ ಅಂತರದಲ್ಲಿ ಗೆಲ್ಲುವತ್ತ ಚಿತ್ತ ಹರಿಸಿದೆ. ಟಿ20ಯಲ್ಲಿ ಪಾಕ್ ವಿರುದ್ಧ ಭಾರತ 13-3 ಗೆಲುವಿನ ದಾಖಲೆ ಹೊಂದಿದ್ದು, ಇದೇ ವಿಶ್ವಾಸದಲ್ಲಿ ಭಾನುವಾರದ ಪಂದ್ಯದಲ್ಲಿ ಕಣಕ್ಕಿಳಿಯಲಿದೆ. ತಂಡದಲ್ಲಿ ಸ್ಮೃತಿ ಮಂಧನಾ, ಶಫಾಲಿ, ಜೆಮಿಮಾ, ರಿಚಾ, ದೀಪ್ತಿ, ಕನ್ನಡತಿ ಶ್ರೇಯಾಂಕ ಸೇರಿದಂತೆ ಪ್ರಮುಖರಿದ್ದಾರೆ. ಮತ್ತೊಂದೆಡೆ ಫಾತಿಮಾ ಸನಾ ನಾಯಕತ್ವದಲ್ಲಿ ಆಡಲಿರುವ ಪಾಕ್ ತಂಡ ಭಾರತಕ್ಕೆ ಸೋಲುಣಿಸುವ ಮೂಲಕ ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ ಆಚ್ಚರಿಯ ಫಲಿತಾಂಶ ನೀಡಲು ಕಾಯುತ್ತಿದೆ.

ಪಂದ್ಯ ಆರಂಭ: ಸಂಜೆ 7 ಗಂಟೆಗೆ
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ವ್ಯಾಟ್ ಶತಕ, ಶ್ರೀಲಂಕಾ ವಿರುದ್ಧ ಇಂಗ್ಲೆಂಡ್‌ಗೆ 87 ರನ್‌ಗಳ ಗೆಲುವು

ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಆತಿಥೇಯರ ಶುಭಾರಂಭ

ಬರ್ಮಿಂಗ್‌ಹ್ಯಾಮ್: ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಆತಿಥೇಯ ಇಂಗ್ಲೆಂಡ್ ಭರ್ಜರಿ ಶುಭಾರಂಭ ಮಾಡಿದೆ. ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ 87 ರನ್ ಭರ್ಜರಿ ಜಯಗಳಿಸಿತು. ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ಕೇವಲ 1 ವಿಕೆಟ್ ನಷ್ಟದಲ್ಲಿ 219 ರನ್ ಕಲೆಹಾಕಿತು. ಆರಂಭಿಕ ಆಟಗಾರ್ತಿ ಡ್ಯಾನಿ ವ್ಯಾಟ್ 62 ಎಸೆತಗಳಲ್ಲಿ ಔಟಾಗದೆ 105 ರನ್ ಸಿಡಿಸಿದರು. ಆ್ಯಮಿ ಜಾನ್ಸ್ 38 ಎಸೆತಕ್ಕೆ 53, ನಾಯಕಿ ನ್ಯಾಟ್‌ಸ್ಕೀವರ್ ಬ್ರಂಟ್ 22 ಎಸೆತಕ್ಕೆ ಔಟಾಗದೆ 46 ರನ್ ಬಾರಿಸಿದರು. ಬೃಹತ್ ಗುರಿ ಬೆನ್ನತ್ತಿದ ಲಂಕಾ 20 ಓವರ್‌ಗಳಲ್ಲಿ 132 ರನ್‌ಗೆ ಆಲೌಟಾಯಿತು.

ಆಸೀಸ್‌ಗೆ 65 ರನ್ ಗೆಲುವು

ಶನಿವಾರ ದ.ಆಫ್ರಿಕಾ ವಿರುದ್ಧ ಆಸ್ಟ್ರೇಲಿಯಾ 65 ರನ್‌ಗಳ ಗೆಲುವು ಸಾಧಿಸಿತು. ಆಸೀಸ್ ಮೊದಲು ಬ್ಯಾಟ್ ಮಾಡಿ 8 ವಿಕೆಟ್‌ಗೆ 172 ರನ್ ಗಳಿಸಿತು. ಲಿಚ್‌ಫೀಲ್ಡ್ 50 ರನ್ ಸಿಡಿಸಿದರು. ದೊಡ್ಡ ಗುರಿ ಬೆನ್ನತ್ತಿದ ದ.ಆಫ್ರಿಕಾ 16.4 ಓವರ್‌ಗಳಲ್ಲಿ 107 ರನ್‌ಗೆ ಆಲೌಟಾಯಿತು.

ಐರ್ಲೆಂಡ್‌ಗೆ 18ನೇ ಸೋಲು

ಶನಿವಾರ ಐರ್ಲೆಂಡ್ ವಿರುದ್ಧ ಸ್ಕಾಟ್ಲೆಂಡ್ 40 ರನ್ ಜಯಗಳಿಸಿತು. ಸ್ಕಾಟ್ಲೆಂಡ್ 5 ವಿಕೆಟ್‌ಗೆ 161 ರನ್ ಗಳಿಸಿತು. ಐರ್ಲೆಂಡ್ 19.1 ಓವರ್‌ನಲ್ಲಿ 121 ರನ್‌ಗೆ ಆಲೌಟಾಯಿತು. ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಐರ್ಲೆಂಡ್ ಆಡಿದ 18 ಪಂದ್ಯಗಳಲ್ಲೂ ಸೋಲನುಭವಿಸಿದೆ.

ವಾರಾಣಸಿಯಲ್ಲಿ ಜಸ್ಪಾಲ್ ರಾಣಾ ಅಂತ್ಯಕ್ರಿಯೆ

ಡೆಹ್ರಾಡೂನ್: ಶುಕ್ರವಾರ ನಿಧನರಾದ ಭಾರತದ ತಾರಾ ಶೂಟಿಂಗ್ ಕೋಚ್, ದಿಗ್ಗಜ ಶೂಟರ್ ಜಸ್ಪಾಲ್ ರಾಣಾ ಅವರ ಅಂತ್ಯಕ್ರಿಯೆ ಶನಿವಾರ ಅವರ ಆಸೆಯಂತೆಯೇ ವಾರಾಣಸಿಯಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ನಡೆಯಿತು. ಅದಕ್ಕೂ ಮುನ್ನ ಡೆಹ್ರಾಡೂನ್‌ನಲ್ಲಿರುವ ಅವರ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಇದೇ ವೇಳೆ ಅವರಿಗೆ ಸಕಲ ಸರ್ಕಾರಿ ಗೌರವಗಳನ್ನು ಸಲ್ಲಿಸಲಾಯಿತು. ರಾಣಾ ತಮ್ಮ ಅಂತ್ಯಕ್ರಿಯೆ ವಾರಾಣಸಿಯಲ್ಲಿ ಆಗಬೇಕೆಂದು ಬಯಸಿ ದ್ದರು. ಹಾಗಾಗಿ ಕುಟುಂಬಸ್ಥರು ಅವರ ಆಸೆ ಈಡೇರಿಸಿದ್ದಾರೆ.

ಫಾರಂ ಜಿ

ವಿವಿಮೆಡ್ ಲ್ಯಾಬ್ ಲಿಮಿಟೆಡ್‌ಗೆ ಆಸಕ್ತಿ ವ್ಯಕ್ತಪಡಿಸಲು ಆಹ್ವಾನ
ಹೈದರಾಬಾದ್, ಹರಿದ್ವಾರ, ಕಾಶಿಪುರ ಮತ್ತು ಬೀದರ್‌ನಲ್ಲಿ ಔಷಧ ಡೋಸೇಜ್ ಫಾರ್ಮ್‌ಗಳ ತಯಾರಕರ ವ್ಯವಹಾರದಲ್ಲಿ ಕಾರ್ಯನಿರ್ವಹಿಸುವುದು.
(ಭಾರತೀಯ ದಿವಾಳಿತನ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಮಗಳು, 2016 ರ ನಿಯಮ 36ಎ ರ ಉಪ-ನಿಯಮ (1) ರ ಅಡಿಯಲ್ಲಿ)

ಕ್ರ.ಸಂ	ಸಂಬಂಧಿತ ಅಂಶಗಳು	
1	ಕಾರ್ಪೊರೇಟ್ ಸಾಲಗಾರನ ಹೆಸರು ಮತ್ತು ಪ್ಯಾನ್ & ಸಿಐಎನ್/ಎಲ್‌ಎಲ್‌ಪಿ ಸಂಖ್ಯೆ	ವಿವಿಮೆಡ್ ಲ್ಯಾಬ್ಸ್ ಲಿಮಿಟೆಡ್ PAN: AAACV6060A CIN: L02411KA1988PLC009465
2	ನೋಂದಾಯಿತ ಕಚೇರಿಯ ವಿಳಾಸ	ಪ್ಲಾಟ್ ನಂ. 78–ಎ, ಕೊಲ್ಹಾರ್ ಇಂಡಸ್ಟ್ರಿಯಲ್ ಪ್ರದೇಶ, ಬೀದರ್, ಕರ್ನಾಟಕ – 585403
3	ವೆಬ್‌ಸೈಟ್‌ನ ಯುಆರ್‌ಎಲ್	https://www.vivimedlabs.com/
4	ಹೆಚ್ಚಿನ ಸ್ಥಿರ ಸ್ವತ್ತುಗಳು ಇರುವ ಸ್ಥಳದ ವಿವರಗಳು	ಎ) ಹೈದರಾಬಾದ್, ತೆಲಂಗಾಣದಲ್ಲಿ ಉತ್ಪಾದನಾ ಸೌಲಭ್ಯಗಳು 2 ಘಟಕಗಳು 1) ಫಾರ್ಮಾ ಘಟಕ – ಡಿ–125 & 128, ಹಂತ III, ಐ.ಡಿ.ಎ. ಜೀಡಿಮೆಟ್ಲಾ ಗ್ರಾಮ, ಮೆಡ್ಚಲ್ – ಮಲ್ಕಾಜ್‌ಗಿರಿ ಜಿಲ್ಲೆ ಹೈದರಾಬಾದ್, ತೆಲಂಗಾಣ ರಾಜ್ಯ 500 055 2) ಫಾರ್ಮಾ ಘಟಕ – ಪ್ಲಾಟ್ ಸಂಖ್ಯೆ 8, ಹಂತ V, ಐಡಿಎ ಜೀಡಿಮೆಟ್ಲಾ, ಮೇಡ್ಚಲ್ – ಮಲ್ಕಾಜ್‌ಗಿರಿ ಜಿಲ್ಲೆ, ತೆಲಂಗಾಣ, ಬಿ) ಉತ್ತರಾಖಂಡದಲ್ಲಿ ಉತ್ಪಾದನಾ ಸೌಲಭ್ಯಗಳು – 2 ಘಟಕಗಳು 3) ಫಾರ್ಮಾ ಘಟಕ – ಪ್ಲಾಟ್ ಸಂಖ್ಯೆ 25, ಕುಂದೇಶ್ವರಿ ಗ್ರಾಮ, ಕಾಶಿಪುರ – 244713 4) ಫಾರ್ಮಾ ಘಟಕ (ಲೀಸ್ಡ್ ಪ್ರೆಮಿಸಸ್) – ಡಿ–9, 10, ಓಲ್ಡ್ ಇಂಡಸ್ಟ್ರಿಯಲ್ ಏರಿಯಾ, ಹರಿದ್ವಾರ, ಉತ್ತರಾಖಂಡ್, 249401 ಸಿ) ಕರ್ನಾಟಕದ ಬೀದರ್‌ನಲ್ಲಿ ಉತ್ಪಾದನಾ ಸೌಲಭ್ಯ – 1 ಘಟಕ 1) ಪ್ಲಾಟ್ ಸಂಖ್ಯೆ 78–ಎ, ಕೊಲ್ಹಾರ್ ಕೈಗಾರಿಕಾ ಪ್ರದೇಶ, ಬೀದರ್, ಕರ್ನಾಟಕ – 585403 (ಕಾರ್ಯನಿರ್ವಹಿಸುತ್ತಿಲ್ಲ) ಡಿ) ಆಂಧ್ರಪ್ರದೇಶದ ಪೈಡಿಭೀಮಾವರಂನಲ್ಲಿರುವ ಸ್ಥಿರ ಆಸ್ತಿ (ಸೆಕ್ಯೂರ್ಡ್ ಫೈನಾನ್ಶಿಯಲ್ ಕ್ರೆಡಿಟ್ದಾರರು ಒದಗಿಸಿದ ಭದ್ರತಾ ಬಡ್ಡಿಯ ಪ್ರಕಾರ)
5	ಮುಖ್ಯ ಉತ್ಪನ್ನಗಳು/ಸೇವೆಗಳ ಸ್ಥಾಪಿತ ಸಾಮರ್ಥ್ಯ	ಅಮಾನತುಗೊಂಡ ನಿರ್ದೇಶಕರ ಮಂಡಳಿಯು ಕೆಳಗೆ ಸಹಿ ಮಾಡಿರುವವರಿಗೆ ಒದಗಿಸಿದ ಮಾಹಿತಿಯ ಪ್ರಕಾರ, ಈ ಕೆಳಗಿನವುಗಳು ಸ್ಥಾಪಿತ ಸಾಮರ್ಥ್ಯಗಳು: •ಟ್ಯಾಬ್ಲೆಟ್‌ಗಳು : 900 ಮಿಲಿಯನ್ •ಕ್ಯಾಪ್ಸುಲ್‌ಗಳು : 580 ಮಿಲಿಯನ್ •ಟಾಪಿಕಲ್ಸ್: 71 ಮಿಲಿಯನ್ •ಓರಲ್: 12 ಮಿಲಿಯನ್ •ನಾಸಲ್ ಸ್ಪ್ರೇಗಳು ಮತ್ತು ನೇತ್ರಶಾಸ್ತ್ರ: 22.5 ಮಿಲಿಯನ್
6	ಕಳೆದ ಹಣಕಾಸು ವರ್ಷದಲ್ಲಿ ಮಾರಾಟವಾದ ಮುಖ್ಯ ಉತ್ಪನ್ನಗಳು / ಸೇವೆಗಳ ಪ್ರಮಾಣ ಮತ್ತು ಮೌಲ್ಯ	ಮೊತ್ತ (ಐಎನ್‌ಆರ್) ಕೋಟಿಗಳಲ್ಲಿ — ವಿವರಗಳು: ಕಾರ್ಯಾಚರಣೆಗಳಿಂದ ಬರುವ ಆದಾಯ; FY 2024-25: 103.60; FY 2023-24: 136.80 (ಆಡಿಟೆಡ್ ಹಣಕಾಸು ಹೇಳಿಕೆಗಳ ಪ್ರಕಾರ) ಗಮನಿಸಿ: 1. ಮಾರ್ಚ್ 31, 2026 ಕ್ಕೆ ಕೊನೆಗೊಂಡ ಹಣಕಾಸು ವರ್ಷದ ವಿವಿಮೆಡ್ ಲ್ಯಾಬ್ಸ್ ಲಿಮಿಟೆಡ್‌ನ ಶಾಸನಬದ್ಧ ಲೆಕ್ಕಪರಿಶೋಧನೆಯು ಪ್ರಸ್ತುತ ನಡೆಯುತ್ತಿದೆ ಮತ್ತು ಈ ಹಣಕಾಸು ವರ್ಷದ ಲೆಕ್ಕಪರಿಶೋಧಿತ ಹಣಕಾಸು ಹೇಳಿಕೆಗಳನ್ನು ಈ ನಮೂನೆ ಜಿ ಪ್ರಕಟಣೆಯ ದಿನಾಂಕದಂದು ಅಂತಿಮಗೊಳಿಸಲಾಗಿಲ್ಲ. 2. ಡಿಸೆಂಬರ್ 31, 2025 ಕ್ಕೆ ಕೊನೆಗೊಂಡ ಒಂಬತ್ತು ತಿಂಗಳ ಕಾರ್ಯಾಚರಣೆಗಳಿಂದ ಬಂದ ಆದಾಯ ಐಎನ್‌ಆರ್ 48.23 ಕೋಟಿ. (ಡಿಸೆಂಬರ್ 31, 2025 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳ ಪ್ರಕಾರ, ಷೇರು ವಿನಿಮಯ ಕೇಂದ್ರಗಳಿಗೆ ಸಲ್ಲಿಸಲಾಗಿದೆ) 3. ಹೆಚ್ಚಿನ ವಿವರಗಳನ್ನು cirp.vivimedlabslimited@hotmail.com ಗೆ ಇಮೇಲ್ ಕಳುಹಿಸುವ ಮೂಲಕ ಪಡೆಯಬಹುದು.
7	ನೌಕರರು / ಕೆಲಸಗಾರರ ಸಂಖ್ಯೆ	552 (ಅಮಾನತುಗೊಂಡ ನಿರ್ದೇಶಕರ ಮಂಡಳಿಯು ಒದಗಿಸಿದ ಮಾಹಿತಿಯ ಪ್ರಕಾರ)
8	ಎರಡು ವರ್ಷಗಳ ಕೊನೆಯ ಲಭ್ಯವಿರುವ ಹಣಕಾಸು ಹೇಳಿಕೆಗಳು (ವೇಳಾಪಟ್ಟಿಗಳೊಂದಿಗೆ), ಸಾಲಗಾರರ ಪಟ್ಟಿಗಳು ಸೇರಿದಂತೆ ಹೆಚ್ಚಿನ ವಿವರಗಳು URL ನಲ್ಲಿ ಲಭ್ಯವಿದೆ:	ಹಣಕಾಸು ಹೇಳಿಕೆಗಳು: https://www.vivimedlabs.com/financials/ ಸಾಲಗಾರರ ಪಟ್ಟಿ : https://ibbi.gov.in/claims/claimprocess/L02411KA1988PLC009465 ಯಾವುದೇ ಹೆಚ್ಚಿನ ವಿವರಗಳನ್ನು cirp.vivimedlabslimited@hotmail.com ಗೆ ಇಮೇಲ್ ಕಳುಹಿಸುವ ಮೂಲಕ ಪಡೆಯಬಹುದು.
9	ಸೆಕ್ಷನ್ 25(2)(h) ಅಡಿಯಲ್ಲಿ ಪರಿಹಾರ ಅರ್ಜಿದಾರರ ಅರ್ಹತೆ ಕೋಡ್ URL ನಲ್ಲಿ ಲಭ್ಯವಿದೆ:	cirp.vivimedlabslimited@hotmail.com ಗೆ ಇಮೇಲ್ ಕಳುಹಿಸುವ ಮೂಲಕ ಹುಡುಕಬಹುದು.
10	ಆಸಕ್ತಿ ಅಭಿವ್ಯಕ್ತಿ ಸ್ವೀಕೃತಿಗೆ ಕೊನೆಯ ದಿನಾಂಕ	29/06/2026
11	ಸಂಭಾವ್ಯ ಪರಿಹಾರ ಅರ್ಜಿದಾರರ ತಾತ್ಕಾಲಿಕ ಪಟ್ಟಿಯನ್ನು ನೀಡುವ ದಿನಾಂಕ	09/07/2026
12	ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	14/07/2026
13	ಸಂಭಾವ್ಯ ಪರಿಹಾರ ಅರ್ಜಿದಾರರ ಅಂತಿಮ ಪಟ್ಟಿಯ ವಿತರಣೆ ದಿನಾಂಕ	24/07/2026
14	ಸಂಭಾವ್ಯ ಪರಿಹಾರ ಅರ್ಜಿದಾರರಿಗೆ ಮಾಹಿತಿ ಜ್ಞಾಪಕ ಪತ್ರ, ಮೌಲ್ಯಮಾಪನ ಮ್ಯಾಟ್ರಿಕ್ಸ್ ಮತ್ತು ಪರಿಹಾರ ಯೋಜನೆಗಳಿಗಾಗಿ ವಿನಂತಿಯನ್ನು ನೀಡಿದ ದಿನಾಂಕ.	29/07/2026
15	ಪರಿಹಾರ ಯೋಜನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	28/08/2026
16	ಆಸಕ್ತಿಯ ಅಭಿವ್ಯಕ್ತಿಯನ್ನು ಸಲ್ಲಿಸಲು ಇಮೇಲ್ ಐಡಿ	cirp.vivimedlabslimited@hotmail.com

ದಿನಾಂಕ : ಜೂನ್ 14, 2026
ಸ್ಥಳ : ಬೆಂಗಳೂರು
ಸಹಿ/–
ಟಿ ನಾರಾಯಣ ಸ್ವಾಮಿ
ಮಧ್ಯಂತರ ರೆಸಲ್ಯೂಶನ್ ವೃತ್ತಿಪರ
ನೋಂದಣಿ ಸಂಖ್ಯೆ: IBBI/IPA-002/IP-N01078/2020-2021/13427
ನೋಂದಣಿ. ವಿಳಾಸ: ನಂ. 15, ಶುಭದೀಪ, 7ನೇ ಕ್ರಾಸ್, ಭುವನೇಶ್ವರಿನಗರ, ಹೆಬ್ಬಾಳ ಕೆಂಪಾಪುರ, ಬೆಂಗಳೂರು ಉತ್ತರ, ಶಕ್ತಿ ಗಣಪತಿ ದೇವಸ್ಥಾನದ ಹತ್ತಿರ, ಬೆಂಗಳೂರು, ಕರ್ನಾಟಕ – 560024
ವಿವಿಮೆಡ್ ಲ್ಯಾಬ್ಸ್ ಲಿಮಿಟೆಡ್‌ಗಾಗಿ

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ
ಐ.ಎಫ್.ಟಿ.ಸಂಖ್ಯೆ: 07/2026.27 ದಿನಾಂಕ: 08.06.2026
ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–1,2,3,4 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.121.07 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.3.20 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 25–06–2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/227/ಕೆಎಸ್‌ಎಂಸಿಎ/2026–27

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ,
ಕ್ಯಾನ್ಸರ್ ಸಂಶೋಧನೆ ಮತ್ತು ತರಬೇತಿ ಕೇಂದ್ರ (ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಪ್ರಾದೇಶಿಕ ಅರ್ಬುದ ಸಂಶೋಧನಾ ಮತ್ತು ಚಿಕಿತ್ಸಾ ಕೇಂದ್ರ
ಡಾ॥ ಎಂ. ಎಚ್.ಮರೀಗೌಡ ರಸ್ತೆ ಬೆಂಗಳೂರು–560029.
Ph: +91 080-2656 0722/2656 0723, 080-6669 7999
No: KMIO/SME(1)/Tender/Manpower/506/2025-26 Date: 12-06-2026
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಇವರು, ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡವುಗಳಿಗಾಗಿ ದ್ವಿಲಕೋಟೆ ಬಿಡ್ ಪದ್ಧತಿಯಲ್ಲಿ ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

Sl No.	Tender No. & Date	Name of the Items
1.	No. KMIO/SME(1) Tender/ Manpower/506/2026-27, Dt: 12-06-2026	Providing Manpower services of Group B, C & D to KMIO
2.	No. KMIO/SME(1) Tender/ Security/507/2026-27, Dt: 12-06-2026	Providing Manpower services of Security Services to Sipanidaga block to KMIO
3.	No. KMIO/SME(1) Tender/ House Keeping/508/ 2026-27, Dt: 12-06-2026	Providing Manpower services of House Keeping Services to Sipanidaga block to KMIO

ಬಿಡ್ ದಾಖಲೆಗಳು ಆನ್‌ಲೈನ್‌ನಲ್ಲಿ ದೊರೆಯುವ ದಿನಾಂಕ: **30–06–2026** ರಿಂದ **31–07–2026**ರ ವರೆಗೆ. ಬಿಡ್ಡರುಗಳು ಬಿಡ್ ದಾಖಲೆಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ನೋಡಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಗಳನ್ನು ಮತ್ತು ಶುಲ್ಕಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದು. ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **31–07–2026**ರ ಸಂಜೆ **4:00** ಗಂಟೆಯವರೆಗೆ. ಟೆಂಡರ್ ಅಂಗೀಕಾರ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕಾರ/ ತಿರಸ್ಕಾರ/ ರದ್ದುಗೊಳಿಸುವ ಅಧಿಕಾರದ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. **ಸಹಿ/–**
ಡಿಐಪಿಆರ್/ಎಸ್ಐ/1151/2026–27 **ಆರ್ಥಿಕ ಸಲಹೆಗಾರರು**

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯಿತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ, ಬೆಂಗಳೂರು–560070
ಕೆಪಿಪಿಪಿ ಪೋರ್ಟಲ್ ಟೆಂಡರ್ ಪ್ರಕಟಣೆ ನೋಟೀಸ್
ಏಕ – ಲಕೋಟೆ
ಕೆಪಿಪಿಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಅ/ಪಂರಾಇವಿ/ಬೆಂನ/ಎಇ–2/ಟೆಂಡರ್/17/2026–27 ದಿನಾಂಕ: 12.06.2026
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Fixing of Rate tender ಕಾಮಗಾರಿಗೆ ಏಕ–ಲಕೋಟೆಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **29.06.2026**ರ **ಸಂಜೆ 4:00 ಗಂಟೆ**ಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **https://kppp.karnataka.gov.in**ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/–, ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/1154/2026–27

CLASSIFIEDS
FOR BOOKING: 080-68416354, 9008255402

MATRIMONIAL

■ ವಧು ವರಾನ್ವೇಷಣೆ
ವಧು ವರಾನ್ವೇಷಣೆ ಬ್ರಾಹ್ಮಣರಲ್ಲಿ ಎಲ್ಲಾ ಪಂಗಡದ ವಧು ವರ ನೋಂದಣಿ ಇದೆ ಸಂಪರ್ಕಿಸಿ. ಪಿ.ಎಸ್.ಗುರುರಾಜ ನಂ.359, ''ಶ್ರೀ ನಿಧಿ'' 11ನೇ ಮುಖ್ಯ ರಸ್ತೆ, ಪೂರ್ಣ ಪ್ರಜ್ಞಾನಗರ, ಉತ್ತರಹಳ್ಳಿ, ಬೆಂಗಳೂರು-560061, ವಾಟ್ಸಪ್ ನಂ.9448368257, ದೂರವಾಣಿ: 08026730287.
BNG-SK

RECRUITMENT

■ ಆಟೋ ಚಾಲಕರು ಬೇಕಾಗಿದ್ದಾರೆ
ಕೋರಮಂಗಲದ ಬಳಿ ಇರುವ ಗ್ಯಾಸ್ ಏಜೆನ್ಸಿಗೆ ಡೆಲಿವರಿ ಮಾಡಲು ಆಟೋ ಹೊಂದಿರುವ ಅಥವಾ ಇಲ್ಲದಿರುವ ಚಾಲಕರು ಬೇಕಾಗಿದ್ದಾರೆ. ಸಂಪರ್ಕಿಸಿ: Mob: 9901845505, 8971731858, 7892518932. MA-623

■ REQUIRED
Kumta/ Ankola/ Honnavara India"s Top Branded, Biggest Financial/ Industrial Group. Exciting Career Opportunity Financial Professionals Mutual Fund Agents Employees Rtd., Bank /Govt., Ex-servicemen Pvt. Teachers, Graduate Home Makers & other above 30yrs+. Interview 18th June Ph:6364563490 / 6366313944
UDP- 0209/2026 -27

ಎಚ್ಚರಿಕೆ–ಈ ಅಂಕಣಗಳಲ್ಲಿ ಜಾಹೀರಾತುಗಳಿಗೆ ಪ್ರತಿಸ್ಪಂದಿಸುವಾಗ ಸಮುಚಿತ ರೀತಿಯಲ್ಲಿ ವಿಚಾರಿಸುವಂತೆ ವಾಚಕರಿಗೆ ಸಲಹೆ ಕೊಡಲಾಗಿದೆ. ಕನ್ನಡಪ್ರಭ ಪಬ್ಲಿಕೇಷನ್ಸ್ ಲಿಮಿಟೆಡ್ ಜಾಹೀರಾತುದಾರರಿಂದ ಮಾಡಲಾದ ಯಾವುದೇ ಕ್ಲೇಮುಗಳಿಗೆ ಹೊಣೆಯಾಗಿರುವುದಿಲ್ಲ. ಮುದ್ರಕ, ಪ್ರಕಾಶಕ, ಸಂಪಾದಕ ಮತ್ತು ಮಾಲೀಕರು ಕನ್ನಡಪ್ರಭ ಪಬ್ಲಿಕೇಷನ್ಸ್ ಲಿಮಿಟೆಡ್ ಇವರು ಅಂತಹ ಕ್ಲೇಮುಗಳ ಅಸತ್ಯವೆಂದು ಕಂಡುಬಂದಲ್ಲಿ ಯಾವುದೇ ಪರಿಣಾಮಗಳಿಗೆ ಜವಾಬ್ದಾರಿ/ಹೊಣೆಯಾಗಿರತಕ್ಕದ್ದಲ್ಲ. ಕನ್ನಡಪ್ರಭ